# ಮಕ್ಕಳಿಗೆ ಬೇಡ ದ್ವೇಷಪ್ರೇಮ

**ಕೋಮುದ್ವೇಷ ಆವರಿಸಿದ ಸಮಾಜದಲ್ಲಿ ಬೆಳೆಯುವ ಮಕ್ಕಳ ಭವಿಷ್ಯದ ಬಗೆಗೂ ಸಮಾಜ ಚಿಂತಿಸಬೇಕಲ್ಲವೇ? ದ್ವೇಷಿಸುವುದನ್ನು ಕಲಿತ ಮಕ್ಕಳು ಭವಿಷ್ಯದಲ್ಲಿ ಎಂತಹ ಸಮಾಜ ಕಟ್ಟಿಕೊಳ್ಳಬಲ್ಲರು?**

■ ಎಚ್.ಕೆ. ಶರತ್

ಮುಂಜಾನೆ ವಾಯುವಿಹಾರದ ಸಮಯದಲ್ಲಿ ಹತ್ತಿರ ಆಸುಪಾಸಿನ ಇಬ್ಬರು ಮಕ್ಕಳು ಬೆಂಚಿನ ಮೇಲೆ ಕುಳಿತು ದಣಿವಾರಿಸಿಕೊಳ್ಳುತ್ತಿದ್ದುದು ಕಣ್ಣಿಗೆಬಿತ್ತು. ಬೆಂಚಿನ ಎದುರೇ ಇದ್ದ ಅರಳಿಮರದ ಬುಡದ ಬಳಿ ಇರುವ ದೇವರ ಮೂರ್ತಿಗೆ ಕೈ ಮುಗಿಯಲು ಒಬ್ಬ ಹೊರಟ. ಮತ್ತೊಬ್ಬ 'ಅಲ್ಲಿಗೆ ಹೋಗುವ ಮೊದಲು ಶೂ ಬಿಚ್ಚು' ಎಂದು ಆಗ್ರಹಿಸಿದ. ದೇವರಿಗೆ ಕೈ ಮುಗಿಯಲು ಹೊರಟವನು, 'ಶೂ ಏಕೆ ಬಿಚ್ಚಬೇಕು? ನಾನು ಹಾಗೇ ಕೈ ಮುಗಿತೀನಿ' ಅಂತ ವಾದಿಸಿದ. ಅದಕ್ಕೆ ಮತ್ತೊಬ್ಬ 'ನೀನು ಸದ್ದಾಂ ಹುಸೇನಾ?' ಅಂತ ವ್ಯಂಗ್ಯವಾಡಿದ. ಅಲ್ಲೇ ಸಮೀಪದಲ್ಲೇ ಇದ್ದ ನನ್ನ ಕಿವಿಗೆ ಅವರಿಬ್ಬರ ಮಾತುಕತೆ ಬೀಳುತ್ತಲೇ ಇತ್ತು. ಆ ಪುಟ್ಟ ಹುಡುಗ ತನ್ನ ಸ್ನೇಹಿತನಿಗೆ 'ನೀನು ಸದ್ದಾಂ ಹುಸೇನಾ?' ಅಂತ ಪದೇ ಪದೇ ಕೇಳುತ್ತಲೇ ಇದ್ದ.

ಇರಾಕ್ ದೇಶದ ಮಾಜಿ ಅಧ್ಯಕ್ಷ ಸದ್ದಾಂ ಹುಸೇನ್ ಹೆಸರು ಈ ಪುಟ್ಟಮಕ್ಕಳಿಗೂ ಅದುಹೇಗೆ ತಿಳಿದಿದೆ ಮತ್ತು ಅದು ಈ ಸಂದರ್ಭದಲ್ಲಿ ಏಕೆ ಬಳಕೆಯಾಗುತ್ತಿದೆ ಎನ್ನುವ ಪ್ರಶ್ನೆ ಕಾಡತೊಡಗಿತು. ಸುದ್ದಿವಾಹಿನಿಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ – ಚಪ್ಪಲಿ ಧರಿಸಿಯೇ ದೇವರಿಗೆ ಕೈ ಮುಗಿದ ಮತ್ತು ಮಾಂಸ ಸೇವಿಸಿಯೂ ದೇವಾಲಯ ಪ್ರವೇಶಿಸಿದ ರಾಜಕಾರಣಿಗಳ ಕುರಿತು ಆಗಾಗ ನಡೆದ ಚರ್ಚೆ ಮಕ್ಕಳ ಮೇಲೆ ಪ್ರಭಾವ ಬೀರಿರಬಹುದೇನೊ? ಮನೆಯಲ್ಲಿ ದೊರೆತ ಪೋಷಕರ ಮಾರ್ಗದರ್ಶನದ ಅನ್ವಯ ದೇವರಿಗೆ ಚಪ್ಪಲಿ ಧರಿಸಿ ಕೈ ಮುಗಿಯುವುದು ತಪ್ಪೆಂದು ಒಬ್ಬನಿಗೆ ಅನಿಸಿರಬಹುದೆಂದುಕೊಂಡೆ. ಆದರೆ, ಸದ್ದಾಂ ಹುಸೇನ್ ಹೆಸರು ನುಸುಳಲು ಕಾರಣವಾದ ಅಂಶಗಳನ್ನು ಪತ್ತೆ ಹಚ್ಚಲು ಹೆಚ್ಚು ತಿಣುಕಾಡುವ ಪ್ರಮೇಯ ಉದ್ಭವಿಸಲಿಲ್ಲ. ನಮ್ಮ ಸುತ್ತಮುತ್ತಲಿನ ಆಗುಹೋಗುಗಳಿಗೆ ಕಣ್ಣು ಮತ್ತು ಕಿವಿಗಳನ್ನು ಒಡ್ಡಿಕೊಂಡ ಯಾರಿಗೇ ಆದಲ್ಲಿ ನಾವು ಜೀವಿಸುತ್ತಿರುವ ವರ್ತಮಾನ ಅದೆಷ್ಟು ದ್ವೇಷಮುಖಿಯಾಗುತ್ತಿದೆ ಎಂಬುದರ ಅರಿವಾಗಿರುತ್ತದೆ.

ರಾಜಕೀಯ ಲಾಭಕ್ಕಾಗಿ ಬಳಸಲಾಗುತ್ತಿರುವ ಕೋಮುದ್ವೇಷವೆಂಬ ಆಯುಧವನ್ನು ಪುಟ್ಟ ಮಕ್ಕಳು ಸಹ ಝಳಪಿಸತೊಡಗಿರುವುದು ಮುಂಬರುವ ದಿನಗಳ ಸಾಮಾಜಿಕ ಆರೋಗ್ಯದ ಕುರಿತು ಆತಂಕ ಹೆಚ್ಚಿಸುತ್ತದೆ. ಅನ್ಯರನ್ನು ದ್ವೇಷಿಸಿ ಎಂದು ಸಾರಿದ ದೇವರು ಮತ್ತು ಧರ್ಮ ಯಾವುದೂ ಇಲ್ಲವೆಂದಾದ ಮೇಲೆ, ದ್ವೇಷ ಕಾರುವ ಉಮೇದು ಹೆಚ್ಚಿಸಲು ಧರ್ಮವೇಕೆ ನೆಪವಾಗುತ್ತಿದೆ? ರಾಜಕೀಯದಲ್ಲಿ ಬಳಕೆಯಾಗುತ್ತಿರುವುದು ಧರ್ಮವೋ ಅಥವಾ ದ್ವೇಷವೋ? ರಾಜಕೀಯ ಲಾಭಕ್ಕಾಗಿ ಬಳಸಲಾಗುತ್ತಿರುವ ಧರ್ಮ ಮತ್ತು ದೇವರಿಗೂ, ತಾವು ಅನುಸರಿಸುವ ಧರ್ಮ ಮತ್ತು ಆರಾಧಿಸುವ ದೇವರಿಗೂ ವ್ಯತ್ಯಾಸವಿದೆಯೆಂದು ನಂಬಿದವರು ದ್ವೇಷ ಹರಡಲು ಧರ್ಮವನ್ನು ಗುರಾಣಿಯಾಗಿಸಿಕೊಂಡವರ ವಿರುದ್ಧ ದನಿ ಎತ್ತಬೇಕಲ್ಲವೇ? ಕೆಲವು ದಿನಗಳ ಹಿಂದೆ ಸೊಪ್ಪು ಮಾರಲೆಂದು ಸೈಕಲ್‌ನಲ್ಲಿ ಬಂದ ವ್ಯಕ್ತಿಯೊಬ್ಬರು, 'ತಾನು ಇಂಥ ಧರ್ಮದವನಲ್ಲ, ಹಾಗಾಗಿ ನೀವು ನನ್ನ ಮೇಲೆ ಯಾವುದೇ ಅನುಮಾನ ಪಡದೆ ಸೊಪ್ಪು ಖರೀದಿಸಬಹುದು' ಅಂತ ಕೊಳ್ಳುತ್ತಿದ್ದವರ ಬಳಿ ಹೇಳುವುದನ್ನು ಗಮನಿಸಿದ್ದೆ. ಇತ್ತೀಚೆಗೆ ಕೆಲವು ಅಂಗಡಿಗಳ ಮುಂದೆ ತಾವು ನಿರ್ದಿಷ್ಟ ಧರ್ಮದವರೆಂದು ತಿಳಿಸುವ ಬಾವುಟಗಳೂ ರಾರಾಜಿಸತೊಡಗಿವೆ.

ನಮ್ಮೆಲ್ಲರ ಬದುಕಿಗೆ ಮಾರಕವಾಗಿರುವ ಪರಿಸರ ಮಾಲಿನ್ಯದಂತಹ ಸಮಸ್ಯೆ ಮತ್ತಷ್ಟು ಬಿಗಡಾಯಿಸದಿರುವ ಹಾಗೆ ನೋಡಿಕೊಳ್ಳಲು ಸರ್ಕಾರ ಪಟಾಕಿ ಬಳಕೆಗೆ ಕಡಿವಾಣ ವಿಧಿಸಲು ಮುಂದಾದರೆ, ಅದಕ್ಕೆ ವಿರೋಧ ವ್ಯಕ್ತಪಡಿಸುವುದು ಅದು ಹೇಗೆ ಧರ್ಮಹಿತದ ಕೆಲಸವಾಗುತ್ತದೆ? ಗಾಳಿಗೆ ವಿಷ ಸೇರಿದರೆ ಅದರ ಪರಿಣಾಮವನ್ನು ಎಲ್ಲ ಧರ್ಮದವರೂ ಸಮಾನವಾಗಿಯೇ ಅನುಭವಿಸುವುದಿಲ್ಲವೇ? ಪಟಾಕಿ ಸುಡದೆ ಹಬ್ಬ ಆಚರಿಸೋಣ ಎನ್ನುವ ಸಂದೇಶ ರವಾನಿಸುವ ಜಾಹೀರಾತಿಗೂ ವಿರೋಧ ವ್ಯಕ್ತವಾಗಿ, ಆ ಜಾಹೀರಾತು ರೂಪಿಸಿದ್ದ ಆಭರಣ ತಯಾರಿಕಾ ಸಂಸ್ಥೆ ಅದನ್ನು ಹಿಂಪಡೆದುದು ಸಂಭ್ರಮಿಸುವ ವಿಚಾರವೇ? ಇಂತಹದ್ದೇ ಸಂದೇಶವನ್ನು ಟ್ವಿಟರ್‌ನಲ್ಲಿ ಕ್ರಿಕೆಟಿಗ ವಿರಾಟ್ ಕೊಹ್ಲಿ ನೀಡಿದ ಕಾರಣಕ್ಕೆ ಅವರನ್ನೂ ಟ್ರೋಲ್ ಮಾಡಲಾಯಿತು.

ಇತ್ತೀಚಿನವರೆಗೂ ಪಟಾಕಿ ಬಳಕೆ ಮಾಡದಿರುವಂತೆ ಮಕ್ಕಳಲ್ಲಿ ಅರಿವು ಮೂಡಿಸುವ ಕೆಲಸವನ್ನು ಶಾಲೆಗಳಲ್ಲಿ ಶಿಕ್ಷಕರು ಮಾಡುತ್ತಿದ್ದರು. ಕೆಲವು ಶಾಲೆಗಳು ಪಟಾಕಿ ಸಿಡಿಸುವುದಿಲ್ಲವೆಂದು ಮಕ್ಕಳಿಂದ ಪ್ರಮಾಣ ಮಾಡಿಸುವ ಪರಿಪಾಠವನ್ನೂ ರೂಢಿಸಿಕೊಂಡಿದ್ದವು. ಆಗೆಲ್ಲ ಇದನ್ನು ಮಕ್ಕಳಲ್ಲಿ ಪರಿಸರದ ಕುರಿತು ಅರಿವು ಮೂಡಿಸುವ ಉತ್ತಮ ಕೆಲಸವೆಂದೇ ಭಾವಿಸಲಾಗುತ್ತಿತ್ತು. ಇಂದು ಯಾರಾದರೂ 'ಪಟಾಕಿ ಸುಡಬೇಡಿ' ಎಂದರೆ ಅವರನ್ನು ಧರ್ಮದ್ರೋಹಿಗಳೆಂದು ಹೀಗಳೆಯುವ ಕಿಡಿಗೇಡಿಗಳ ಪಡೆಯೇ ರೂಪುಗೊಂಡಿದೆ. ಇದು ದೇಶದ ಬೀದಿಗಳಿಂದ ಹಿಡಿದು ಟ್ವಿಟರ್‌ನಂತಹ ಆನ್‌ಲೈನ್ ವೇದಿಕೆಗಳವರೆಗೂ ತನ್ನ ಕಾರ್ಯವ್ಯಾಪ್ತಿ ಹೊಂದಿದೆ. ಈ ಸಂಗತಿ ನಮ್ಮನ್ನು ಚಿಂತೆಗೀಡುಮಾಡಬೇಕಲ್ಲವೇ?

ಪ್ರತಿಕ್ರಿಯಿಸಿ: feedback@sudha.co.in

